ಗುರುಗಳೆಂದು ಆರಾಧಿಸುತ್ತಿದ್ದರು. ಅದನ್ನು ಅವರು ಹೀಗೆ ಕಾವ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ.

'ಅರಿವೆಂಬ ರವಿಯು ಮೂಡಲು
ಗುರುವೆಂಬಾತ್ಮಾರವಿಂದವರಳಿತು ನನ್ನೊಳ್.'

ಬೇಂದ್ರೆಯವರ ಕಾವ್ಯದಲ್ಲಿ ಅರವಿಂದರ ಚತುರ್ಮುಖ ಸಿದ್ಧಾಂತ ಹಾಸು ಹೊಕ್ಕಾಗಿ ಹೋಗಿದೆ. ಆ ಸಿದ್ಧಾಂತದಿಂದ ನಾಲ್ಕು ನುಡಿಗಳಲ್ಲಿ ಒಂದೊಂದು ಸೌಂದರ್ಯ ಲಕ್ಷಣಗಳನ್ನು ಸೃಷ್ಟಿಸಿ ಈ ಕವನಗಳನ್ನು ರಚಿಸಿದರು: 'ಚಂದ್ರ', 'ಗಂಡುಸು ಹೆಂಗುಸಿಗೆ', 'ಚತುರ್ಮುಖ ಸೌದರ್ಯ', 'ಹಂಪಿ ವಿಜಯನಗರ ದರ್ಶನ'.

★★★

ಬೇಂದ್ರೆಯವರ ಕಾವ್ಯ ಬೆಳಕು ಮತ್ತು ಅರಿವಿನ ಶೋಧವಾಗಿದೆ. ಅವರು ಚಿಕ್ಕಂದಿನಲ್ಲಿ ಹಗಲಿನಲ್ಲಿ ಕತ್ತಲೆ ಕೋಣೆ ಕಂಡು ತಾಯಿಯನ್ನು ಕೇಳುತ್ತಿದ್ದ ಪ್ರಶ್ನೆ 'ಬೆಳಕೆ ಬೆಳಕಿದ್ದು ಕತ್ತಲೆಯು ಆಯಿತು ಹೇಗೆ?' ಅವರ ಕಾವ್ಯದ ಸ್ಥಾಯಿಭಾವ ಬೆಳಕು. ಅವರಿಗೆ ತಾಯಿಯೆಂದರೆ ಬೆಳಕು ಮತ್ತು ಅರಿವು. ಆದುದರಿಂದ ಅವರು ತಾಯಿಯನ್ನು ಹೀಗೆ ಧ್ಯಾನಿಸಿದ್ದಾರೆ:

'ಬೆಳಕಿನ ಬಾಂಧವ್ಯದಿಂದ ತಾಯಿಸೆರಗ ಹಿಡಿದೆವು
ಬೆಳಕಿನಿಂದ ಬಂದೆವಣ್ಣ ಬೆಳಕಿನತ್ತ ನಡೆದೆವು.'

★★★

ಬೇಂದ್ರೆಯವರು 'ಸೂರ್ಯ ಸ್ನಾನದ ಅನಂತಗೀತ'ವನ್ನು 'ಸೂರ್ಯನ ಹೊಳಿ' ಕವನದಲ್ಲಿ ನೀಡಿದ್ದಾರೆ. ಸೃಷ್ಟಿಕಾರಣ ಮತ್ತು ಜ್ಞಾನದ ಪ್ರತೀಕ ಸೂರ್ಯ. ಅವನ ಕಿರಣದ ಹೊಳೆಯಲ್ಲಿ ಮೀಯುವುದು ಮನುಷ್ಯ ಜನ್ಮದ ಸಾರ್ಥಕತೆ. ಅದು ಅವನನ್ನು ಜ್ಞಾನಮುಖಿಯಾಗಿಸುತ್ತದೆ ಎಂಬ ತಿಳಿವಿನಲ್ಲಿ ಗೆಳೆಯರನ್ನು ಹೀಗೆ ಕೂಗಿ ಕರೆದಿದ್ದಾರೆ:

ಬಂದದ ಸೂರ್ಯನs ಹೊಳೀ,
ನಡೀ ಮೈ ತೊಳಿ, ನೀರಿನ್ಯಾಗಿಳಿ,
ಬಾ ಗೆಣೆಯಾ ಯಾಕ ಮೈಛಳೀ

ಹಳಹಳಕು ಹೀರಕದ ಕಾಂತಿ,
ಅಲ್ಲಿ ಚಿರಶಾಂತಿ ಹರಿಯುವುದು ಭ್ರಾಂತಿ
ಬಾ ಯಾಕ ಸುಮ್ಮನs ನಿಂತೀ ಪಲ್ಲ

## ಜಿ. ಕೃಷ್ಣಪ್ಪ

ಬೇಂದ್ರೆ ಕೃಷ್ಣಪ್ಪ ಎಂದೇ ಜನಪ್ರಿಯರಾಗಿರುವ ಸೃಜನಶೀಲ ಲೇಖಕ ಜಿ. ಕೃಷ್ಣಪ್ಪ, ಬೇಂದ್ರೆ ಕಾವ್ಯವನ್ನು ಜನರಿಗೆ ಮುಟ್ಟಿಸುವ ದಿಸೆಯಲ್ಲಿ ಅಪಾರವಾದ ಕೆಲಸ ಮಾಡಿದ್ದಾರೆ. ಸುಮಾರು 16 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇತ್ತೀಚೆಗೆ ಅವರು ಪ್ರಕಟಿಸಿದ ಪುಸ್ತಕ 'ಬೇಂದ್ರೆ ಕಾವ್ಯ ಪದನಿರುಕ್ತ' ಆಸಕ್ತರ ಗಮನ ಸೆಳೆದಿದೆ. ಬೆಂಗಳೂರಿನವರಾದ ಕೃಷ್ಣಪ್ಪ ರಾಜ್ಯ ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ವೃತ್ತಿಯನ್ನು ಆರಂಭಿಸಿ, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ನಿವೃತ್ತರಾಗಿದ್ದಾರೆ.